# Qualcomm ಸಾಫ್ಟ್‌ವೇರ್ ಮತ್ತು ಅಪ್ಲಿಕೇಶನ್‌ಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಿ

Qualcomm Incorporated ನ ಆಧೀನ ಸಂಸ್ಥೆಗಳು ವಿವಿಧ ಸಾಫ್ಟ್‌ವೇರ್‌ಗಳು, ಅಪ್ಲಿಕೇಶನ್‌ಗಳು ಮತ್ತು ಸೇವೆಗಳನ್ನು ಮೊಬೈಲ್ ಸಾಧನದ ಕಾರ್ಯನಿರ್ವಹಣೆಯನ್ನು ಸುಧಾರಿಸಲು, ಬ್ಯಾಟರಿ ವ್ಯಯವಾಗುವುದನ್ನು ತಡೆಗಟ್ಟಲು ನೆರವಾಗಲು ಮತ್ತು ಸಾಧನದ ಸುರಕ್ಷತೆಯನ್ನು ಸುಧಾರಿಸುವುದಕ್ಕಾಗಿ ಒದಗಿಸುತ್ತವೆ.  ಅವುಗಳಲ್ಲಿ ಕೆಳಗಿನ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳು ಸೇರಿರುತ್ತವೆ:

**Qualcomm ಲೊಕೇಶನ್**

Qualcomm ಲೊಕೇಶನ್ (ಹಿಂದೆ “IZat”) ಎನ್ನುವುದು ಯುಎಸ್‌ನಲ್ಲಿ Qualcomm Technologies, Inc. ಐರೋಪ್ಯ ಆರ್ಥಿಕ ವಲಯದಲ್ಲಿ QT Technologies Ireland Limited, ಕೋರಿಯಾ ಗಣರಾಜ್ಯದಲ್ಲಿ (ದಕ್ಷಿಣ ಕೋರಿಯಾ) Qualcomm CDMA ಟೆಕ್ನಾಲೊಜಿಸ್ (ಕೋರಿಯಾ) YH ಗಳು ಒದಗಿಸುತ್ತಿರುವ ತಂತ್ರಜ್ಞಾನವಾಗಿದೆ.  Qualcomm ಲೊಕೇಶನ್ ನಿಮ್ಮ ಸಾಧನಕ್ಕೆ ಬಲಿಷ್ಠ GPS ಸಿಗ್ನಲ್ ಸಿಗುವ ಸಾಧ್ಯತೆ ಇಲ್ಲದಿರುವಾಗಲೂ ನಿಮ್ಮ ಸಾಧನವು ಹೆಚ್ಚು ತ್ವರಿತವಾಗಿ ಮತ್ತು ನಿಖರವಾಗಿ ನಿರ್ಧರಿಸುವುದನ್ನು ಸಾಧ್ಯವಾಗಿಸಬಹುದು. Qualcomm ಲೊಕೇಶನ್ ನೀವು ಸ್ಥಳದ ಡೇಟಾ ಅಗತ್ಯವಾಗುವ ಅಪ್ಲಿಕೇಶನ್‌ಗಳು ಅಥವಾ ಸೇವೆಗಳನ್ನು ಬಳಸಿದಾಗ ನಿಮ್ಮ ಸಾಧನಕ್ಕೆ ಬ್ಯಾಟರಿ ಶಕ್ತಿಯನ್ನು ಉಳಿಸಲು ಕೂಡ ಸಹಾಯ ಮಾಡಬಹುದು.  ನೀವು ಸ್ಥಳ ಸಕ್ರಿಯಗೊಳಿಸಿದ ಅಪ್ಲಿಕೇಶನ್‌ಗಳನ್ನು ಬಳಸಿದಲ್ಲಿ, ನಿಮ್ಮ ಸಾಧನವು ತನ್ನ ಸ್ಥಳವನ್ನು ಅಂತಹ ಅಪ್ಲಿಕೇಶನ್ ಒದಗಿಸುವವರಿಗೆ ಕಳುಹಿಸಬಹುದು.  ಅಪ್ಲಿಕೇಶನ್ ಪೂರೈಕೆದಾರರಿಗೆ ನೀಡುವ ಸ್ಥಳ ಮಾಹಿತಿಯು ಅವರ ನಿಯಮಗಳು ಮತ್ತು ಗೌಪ್ಯತೆಯ ನೀತಿಗಳ ಪ್ರಕಾರ ನಿಯಂತ್ರಿಸಲ್ಪಡುತ್ತವೆ. ನಾನುವ ನಿಮಗೆ ಆ ಅಪ್ಲಿಕೇಶನ್ ಪೂರೈಸುವವರ ನಿಯಮಗಳು ಮತ್ತು ಗೌಪ್ಯತೆಯ ನೀತಿಗಳನ್ನು ಉಲ್ಲೇಖಿಸುವುದಕ್ಕೆ ಶಿಫಾರಸು ಮಾಡುತ್ತೇವೆ.

ಹತ್ತಿರದ ಸೆಲ್ಯುಲರ್ ಟವರ್‌ಗಳು ಮತ್ತು WiFi ಆಕ್ಸೆಸ್ ಪಾಯಿಂಟುಗಳ ಕುರಿತು Qualcomm ಲೊಕೇಶನ್ ನಿಮ್ಮ ಸಾಧನಕ್ಕೆ ಡೇಟಾವನ್ನು ಡೌನ್‌ಲೋಡ್ ಮಾಡುತ್ತದೆ. ಈ ಡೇಟಾವನ್ನು ತನ್ನ ಸ್ಥಳವನ್ನು ನಿರ್ಧರಿಸುವುದಕ್ಕೆ ಸಹಾಯ ಮಾಡಲು ಮತ್ತು ಬ್ಯಾಟರಿ ಶಕ್ತಿಯನ್ನು ಉಳಿಸಲು ಗೈರೊಸ್ಕೋಪ್ ಅಥವಾ ಆಕ್ಸಿಲರೋಮೀಟರ್‌ನಂತಹ ನಿಮ್ಮ ಸಾಧನದ ಸೆನ್ಸರುಗಳ ಡೇಟಾದ ಜೊತೆಯಲ್ಲಿ ಸಂಯೋಜಿಸಬಹುದು.

Qualcomm ಲೊಕೇಶನ್ ನಿಯತಕಾಲಿಕವಾಗಿ ನಮಗೆ ವಿಶಿಷ್ಟ ಸಾಫ್ಟ್‌ವೇರ್ ID, ನಿಮ್ಮ ಸಾಧನದ ಸ್ಥಳ (ಅಕ್ಷಾಂಶ, ರೇಖಾಂಶ, ಸಮುದ್ರ ಮಟ್ಟದಿಂದ ಎತ್ತರ ಮತ್ತು ಇದರ ಅನಿಶ್ಚಿತತೆ) ಮತ್ತು ಹತ್ತಿರದ ಸೆಲ್ಯುಲರ್ ಟವರ್‌ಗಳು, Wi-Fi ಹಾಟ್‌ಸ್ಪಾಟ್‌ಗಳು, ಸಿಗ್ನಲ್ ಸಾಮರ್ಥ್ಯ ಮತ್ತು ಸಮಯ(ಒಟ್ಟಾಗಿ “ಸ್ಥಳ ಡೇಟಾ”)ವನ್ನು ಕಳುಹಿಸುತ್ತದೆ. ಯಾವುದೇ ಇಂಟರ್‌ನೆಟ್ ಸಂವಹನದಲ್ಲಿ ಇರುವಂತೆ, ನಾವು ನಿಮ್ಮ ಸಾಧನವು ಬಳಸುತ್ತಿರುವ IP ಅಡ್ರೆಸ್ ಅನ್ನು ಕೂಡ ಪಡೆಯುತ್ತೇವೆ. ನಾವು ಸ್ಥಳ ಡೇಟಾ, ಸಾಫ್ಟ್‌ವೇರ್ ID ಗಳು ಮತ್ತು IP ಅಡ್ರೆಸ್‌ಗಳನ್ನು, ಹಾಗೂ ನಾವು ಸಂಗ್ರಹಿಸುವ ಇತರ ಡೇಟಾವನ್ನು ನಮ್ಮ ಸಿಸ್ಟಮ್‌ಗಳನ್ನು ರಕ್ಷಿಸಲು, ಮೌಲ್ಯಮಾಪನ ಮಾಡಲು ಮತ್ತು ಸುಧಾರಿಸಲು ಬಳಸುತ್ತೇವೆ.

Qualcomm ಲೊಕೇಶನ್ ಸಕಾರಣವಾದ ಮತ್ತು ಸೂಕ್ತವಾದ ಸುರಕ್ಷತಾ ಕ್ರಮಗಳನ್ನು ನಾವು ಸಂಗ್ರಹಿಸುವ ಡೇಟಾವನ್ನು ರಕ್ಷಿಸುವುದಕ್ಕಾಗಿ ಬಳಕೆ ಮಾಡುತ್ತದೆ. ಇದರೊಂದಿಗೆ, ನಿಮ್ಮ ಸಾಫ್ಟ್‌ವೇರ್ ID ಅಥವಾ IP ಅಡ್ರೆಸ್ ಹೊಂದಿರುವ ಸ್ಥಳ ಡೇಟಾವನ್ನು ಸಂಗ್ರಹಿಸುವುದಿಲ್ಲ ಅಥವಾ ನಾವು Qualcomm ಲೊಕೇಶನ್ ಬಳಕೆದಾರರನ್ನು ವೈಯಕ್ತಿಕವಾಗಿ ಗುರುತಿಸಲು ಬಯಸುವುದಿಲ್ಲ. ಸಿಸ್ಟಂ ಕಾರ್ಯನಿರ್ವಹಣೆಯನ್ನು ಉತ್ತೇಜಿಸಲು ನಿಮ್ಮ ಸಾಫ್ಟ್‌ವೇರ್ ID ಮತ್ತು IP ಅಡ್ರೆಸ್ ಸ್ಥಳ ಡೇಟಾದೊಂದಿಗೆ ಪಡೆದ ನಂತರದ ಮೂವತ್ತು ದಿನಗಳವರೆಗೆ ಸಂಯೋಜಿಸಲ್ಪಡುತ್ತವೆ, ಇದರ ನಂತರ ಇದನ್ನು ಸಂಪೂರ್ಣವಾಗಿ ಅಳಿಸಲಾಗುವುದು. IP ಅಡ್ರೆಸ್ ಹಾಗೂ ಸಾಫ್ಟ್‌ವೇರ್ ID ಗಳನ್ನು ತೆಗೆದ ನಂತರ, ನಾವು ಸ್ಥಳ ಡೇಟಾವನ್ನು ಸೆಲ್ಯುಲರ್ ಟವರ್‌ಗಳು ಮತ್ತು WiFi ಆಕ್ಸೆಸ್ ಪಾಯಿಂಟುಗಳ ಸ್ಥಳದ ಕುರಿತು ಅನಾಮಧೇಯವಾಗಿರುವ ಡೇಟಾಬೇಸ್ ರಚಿಸುವುದಕ್ಕಾಗಿ ಒಟ್ಟುಗೂಡಿಸುತ್ತೇವೆ.

ನೀವು ಕೋರಿಯಾ ಗಣರಾಜ್ಯದಲ್ಲಿ ಇದ್ದಲ್ಲಿ, Qualcomm ಲೊಕೇಶನ್ ಸೇವೆಯು ಲೊಕೇಶನ್ ಇನ್‌ಫಾರ್ಮೇಶನ್ ಪ್ರೊಟೆಕ್ಷನ್ ಆ್ಯಕ್ಟ್ ("ಆ್ಯಕ್ಟ್") ಗೆ ಬದ್ಧವಾಗಿರುತ್ತದೆ ಮತ್ತು ಈ ಕಾಯಿದೆಯ ಅಡಿಯಲ್ಲಿನ ಪ್ರಸ್ತುತವಾಗಿರುವ ಹಕ್ಕುಗಳನ್ನು ಹೊಂದಿರುತ್ತೀರಿ.  ಕೋರಿಯಾದಲ್ಲಿ ನಮ್ಮ ರೂಢಿಗಳ ಕುರಿತು ಪ್ರಶ್ನೆಗಳು ಅಥವಾ ಕಮೆಂಟುಗಳಿಗಾಗಿ, ದಯವಿಟ್ಟು ನಮ್ಮನ್ನು ಇಲ್ಲಿ ಸಂಪರ್ಕಿಸಿ:


Qualcomm CDMA ಟೆಕ್ನಾಲೊಜಿಸ್ (ಕೋರಿಯಾ) YH
ಅಟೆನ್ಶನ್ ಲೀಗಲ್ ಡಿಪಾರ್ಟ್‌ಮೆಂಟ್
4ನೇ, 15ನೇ, 16ನೇ & 17ನೇ ಎಫ್ಐ.
119, Nonhyeon-dong, Gangnam-gu
Seoul, 135-820
ರಿಪಬ್ಲಿಕ್ ಆಫ್ ಕೋರಿಯಾ
ದೂರವಾಣಿ ಸಂಖ್ಯೆ: 82-2-3404-1114


**Qualcomm ಟೆಕ್ನಾಲೊಜಿ ರಿಪೋರ್ಟಿಂಗ್ (QTR) - ಡಯಾಗ್ನಾಸ್ಟಿಕ್ ಅಂಕಿಅಂಶಗಳು**

QTR ಯುಎಸ್‌ನಲ್ಲಿ ಕ್ವಾಲಕಾಂ ಟೆಕ್ನಾಲೊಜಿಸ್ ಇಂಕ್. ಮತ್ತು ಐರೋಪ್ಯ ಆರ್ಥಿಕ ವಲಯದಲ್ಲಿ QT Technologies Ireland Limited ಒದಗಿಸುವ ತಂತ್ರಜ್ಞಾನವಾಗಿದೆ.  QTR ಇವುಗಳನ್ನು ಸಂಗ್ರಹಿಸಬಹುದು: (i) ಸಾಧನದಲ್ಲಿ ಇನ್‌ಸ್ಟಾಲ್ ಮಾಡಿರುವ ಮತ್ತು / ಅಥವಾ ಚಾಲನೆಯಲ್ಲಿರುವ ಆ್ಯಪ್‌ಗಳ ಹೆಸರುಗಳು, (ii) ಕಾನ್ಫಿಗರೇಶನ್ ಮಾಹಿತಿ (ಉದಾಹರಣೆಗೆ, ಮಾಡೆಲ್, ಆಪರೇಟಿಂಗ್ ಸಿಸ್ಟಮ್ ಮತ್ತು ಆವೃತ್ತಿ, ಫರ್ಮ್‌ವೇರ್ ಮತ್ತು ಆವೃತ್ತಿಗಳು, ವೈರ್‌ಲೆಸ್ ಕ್ಯಾರಿಯರ್, ಮೊಬೈಲ್ ದೇಶ ಕೋಡ್ ಮತ್ತು ನೆಟ್‌ವರ್ಕ್ ಕೋಡ್ ಮತ್ತು ಚಿಪ್‌ಸೆಟ್ ಸಿರಿಯಲ್ ನಂಬರ್ (ಇದು ನಿಮ್ಮನ್ನು ಗುರುತಿಸುವುದಿಲ್ಲ)) (iii) ಸಾಧನ ಕಾರ್ಯನಿರ್ವಹಣೆಯ ಮತ್ತು ಸುರಕ್ಷತೆಯ ಅಂಕಿಅಂಶಗಳು (CPU, GPU, ಅಥವಾ ಮೋಡೆಮ್ ಕಾರ್ಯಕ್ಷಮತೆ), ಮತ್ತು (iv) ನಿಮ್ಮನ್ನು ಗುರುತಿಸದ ಚಲನೆಯನ್ನು, ದೃಷ್ಟಿಕೋನವನ್ನು, ಮತ್ತು ಫೋನ್ ಸುತ್ತಲಿನ ಪರಿಸರದ ಪರಿಸ್ಥಿತಿಗಳನ್ನು ಅಳತೆ ಮಾಡುವ ಸೆನ್ಸರ್ ಡೇಟಾ.  ಡೇಟಾವನ್ನು ಎನ್‌ಕ್ರಿಪ್ಟ್

ಮಾಡಿರುವ WiFi ಮೂಲಕ ಅಥವಾ ಸೀಮಿತ ಪ್ರಮಾಣದಲ್ಲಿ ನಿಮ್ಮ ಸೆಲ್ಯುಲರ್ ನೆಟ್‌ವರ್ಕ್‌ನಿಂದ ಅಪ್‌ಲೋಡ್ ಮಾಡಲಾಗುತ್ತದೆ.

ನಾವು QTR ಸಂಗ್ರಹಿಸುವ ಮಾಹಿತಿಯನ್ನು ವೈರ್‌ಲೆಸ್ ಕಾರ್ಯಕ್ಷಮತೆ ಸುಧಾರಿಸುವುದು, ಬ್ಯಾಟರಿ ಶಕ್ತಿ ಉಳಿಸುವುದು, ಸುರಕ್ಷತಾ ಕ್ರಮಗಳನ್ನು ಅಭಿವೃದ್ಧಿಪಡಿಸುವುದು ಮತ್ತು ನಮ್ಮ ವ್ಯಾವಹಾರಿಕ ಕಾರ್ಯನಿರ್ವಹಣೆಯನ್ನು ಸುಧಾರಿಸುವುದಕ್ಕೆ ನೆರವಾಗುವ ಮುಂದಿನ ತಲೆಮಾರಿನ ಮೊಬೈಲ್ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದಕ್ಕೆ ನಮಗೆ ನೆರವಾಗುವುದನ್ನು ಒಳಗೊಂಡು ಈ ನೀತಿಯಲ್ಲಿ ವಿವರಿಸಿದ ಉದ್ದೇಶಗಳಿಗಾಗಿ ಸಂಗ್ರಹಿಸುತ್ತೇವೆ. ನಾವು QTR ಡೇಟಾವನ್ನು ವೈರ್‌ಲೆಸ್ ಕೆರಿಯರ್‌ಗಳು ಅಥವಾ ಸಾಧನದ ತಯಾರಕರ ಜೊತೆಯಲ್ಲಿ ಅವರಿಗೆ ವೈರ್‌ಲೆಸ್ ಸಾಧನಗಳು, ನೆಟ್‌ವರ್ಕ್‌ಗಳು ಮತ್ತು ಸುರಕ್ಷತೆಯನ್ನು ಸುಧಾರಿಸುವುದಕ್ಕಾಗಿ ಹಂಚಿಕೊಳ್ಳಬಹುದು.

QTR "Qualcomm ಟೆಕ್ನಾಲೊಜೀಸ್ ರಿಪೋರ್ಟಿಂಗ್" ಎಂಬ ಶೀರ್ಷಿಕೆಯಡಿಯಲ್ಲಿ Android ಸೆಟ್ಟಿಂಗ್‌ಗಳ ಮೆನುವಿನಲ್ಲಿ ಡೇಟಾ ಸಂಗ್ರಹಣೆಯಿಂದ ಹೊರಬರುವ ಆಯ್ಕೆಯನ್ನು ಒದಗಿಸುತ್ತದೆ. ಹೊರಗುಳಿಯುವುದು ನಿಮ್ಮ ಸಾಧನದ ಕಾರ್ಯಕ್ಷಮತೆಯ ಮೇಲೆ ಋಣಾತ್ಮಕ ಪರಿಣಾಮ ಬೀರುವುದಿಲ್ಲ.

<u>ಕೆಲವು ಟಿಪ್ಪಣಿಗಳು</u>: ಯಾವುದೇ ಇಂಟರ್‌ನೆಟ್ ಸಂಪರ್ಕದಂತೆಯೇ, ಸಾಧನವು ಬಳಸುವ IP ಅಡ್ರೆಸ್ ಅನ್ನು ನಾವು ಸ್ವೀಕರಿಸುತ್ತೇವೆ, ಆದರೆ ಅದನ್ನು ಪಡೆದ ನಂತರ ನಾವು ಸೂಕ್ತವಾಗಿ ಅಳಿಸುತ್ತೇವೆ. QTR ಈ ಗೌಪ್ಯತಾ ನೀತಿಯಲ್ಲಿ ಗುರುತಿಸದ ಯಾವುದೇ ಡೇಟಾವನ್ನು ಕಳುಹಿಸಿದರೆ, ಅದು ವೈಯಕ್ತಿಕ ಡೇಟಾವೂ ಆಗಿರಬಹುದಾಗಿದ್ದು ಅಂತಹ ಡೇಟಾವನ್ನು ಪಡೆದ ನಂತರ ನಾವು ಸೂಕ್ತವಾಗಿ ಅಳಿಸುತ್ತೇವೆ. QTR ನ ಕೆಲವು ಆವೃತ್ತಿಗಳು ಸಾಧನದ "ಇಂಟರ್‌ನ್ಯಾಶನಲ್ ಮೊಬೈಲ್ ಇಕ್ವಿಪ್‌ಮೆಂಟ್ ಐಡೆಂಟಿಫೈಯರ್ (IMEI) ಅನ್ನು ಸಂಗ್ರಹಿಸುವ ಸಾಮರ್ಥ್ಯವನ್ನೂ ಹೊಂದಿವೆ, ಆದರೆ ಈ ಸಾಮರ್ಥ್ಯವನ್ನು ಪ್ರಸ್ತುತ ಬಳಸಲಾಗುವುದಿಲ್ಲ. ಭವಿಷ್ಯದಲ್ಲಿ, ನಾವು IMEI ಅನ್ನು ಸಂಗ್ರಹಿಸಿದರೆ, ಅದನ್ನು ಬಹಿರಂಗಪಡಿಸಿರುವ ಅಗತ್ಯ ಉದ್ದೇಶಗಳಿಗಾಗಿ ಮತ್ತು ಎಲ್ಲಾ ಅನ್ವಯವಾಗುವ ಡೇಟಾ ರಕ್ಷಣೆ ಮತ್ತು ಗೌಪ್ಯತೆ ಕಾನೂನುಗಳಿಗೆ ಅನುಗುಣವಾಗಿ ಸಂಗ್ರಹಿಸಲಾಗುತ್ತದೆ. ಅಂತಿಮವಾಗಿ, QTR ನ ಕೆಲವು ಆವೃತ್ತಿಗಳು ನಮಗೆ ಸಾಧನ ಸ್ಥಳ ಡೇಟಾವನ್ನು ಕಳುಹಿಸಲು ಆಯ್ಕೆ ಮಾಡುವ ಅವಕಾಶ ನೀಡುತ್ತವೆ. ನಮಗೆ ಸ್ಥಳ ಡೇಟಾವನ್ನು ಕಳುಹಿಸಲು ನೀವು ಆಯ್ಕೆ ಮಾಡಿದರೆ, ಕಡಿಮೆ ವೈರ್‌ಲೆಸ್ ಸಿಗ್ನಲ್ ಕವರೇಜ್ ಇರುವ ಪ್ರದೇಶಗಳನ್ನು ಗುರುತಿಸಲು ನಮಗೆ ಸಹಾಯ ಮಾಡಲು ನಾವು ನಿಮ್ಮ ಸಾಧನದ ಸ್ಥಳವನ್ನು ನಿಯತಕಾಲಿಕವಾಗಿ ಸಂಗ್ರಹಿಸಬಹುದು.

**Snapdragon Smart Protect**

Qualcomm® Snapdragon™ Smart Protect ಐರೋಪ್ಯ ಆರ್ಥಿಕ ವಲಯದಲ್ಲಿ QT Technologies Ireland Limited ಮತ್ತು ಯುಎಸ್‌ನಲ್ಲಿ Qualcomm Technologies, Inc. ಒದಗಿಸುವ Android ಆಧರಿತ ಸಾಧನಗಳಿಗೆ ("Smart Protect") ಒಂದು ಸುರಕ್ಷತಾ ಸಾಫ್ಟ್‌ವೇರ್ ಸೇವೆಯಾಗಿದೆ, ಸ್ಮಾರ್ಟ್ ಪ್ರೊಟೆಕ್ಟ್ ಇದನ್ನು ಇನ್‌ಸ್ಟಾಲ್ ಮಾಡಿರುವ ಸಾಧನದಲ್ಲಿ ಅಪ್ಲಿಕೇಶನ್‌ಗಳ ನಡವಳಿಕೆಯನ್ನು ಗಮನಿಸುತ್ತದೆ ಮತ್ತು malware, spyware, adware ಮತ್ತು ransomware ಸಂಭಾವ್ಯವಾಗಿ ಸೂಚಿಸುವ ನಡವಳಿಕೆಗಳಿಗಾಗಿ ಮಶಿನ್ ಲರ್ನಿಂಗ್ ಅನ್ನು ಬಳಸುತ್ತದೆ. Smart Protect ಅಂತಹ

ನಡವಳಿಕೆಗಳ ಕುರಿತು ಇದೇ ಸಾಧನದಲ್ಲಿ ಇನ್‌ಸ್ಟಾಲ್ ಮಾಡಿರುವ ನಮ್ಮ ಗ್ರಾಹಕರ ಮೂರನೇ ಪಕ್ಷದ ಸುರಕ್ಷತಾ ಅಪ್ಲಿಕೇಶನ್‌ಗಳಿಗೆ ವರದಿಯನ್ನು ನೀಡುತ್ತದೆ.

Smart Protect ಅನ್ನು ಸುಧಾರಿಸಲು ಸಹಾಯ ಮಾಡುವುದಕ್ಕೆ ಮತ್ತು ಈ ಗೌಪ್ಯತೆಯ ನೀತಿಯಲ್ಲಿ ವಿವರಿಸಿದ ಇತರ ಬಳಕೆಗಳಿಗಾಗಿ Smart Protect ನಮಗೆ ಸಂಭಾವ್ಯ ಮಾಲ್‌ವೇರ್ ಪತ್ತೆಯ(ಗಳ)ಕುರಿತು ಸಾರಾಂಶವೊಂದನ್ನು ಆ್ಯಪ್ ಹೆಸರು ಮತ್ತು ಅಲರ್ಟ್ ಉಂಟುಮಾಡುವ ಇದರ ಚಟುವಟಿಕೆ, ತಯಾರಕರು, ಮಾಡೆಲ್ ಮತ್ತು ಆಪರೇಟಿಂಗ್ ಸಿಸ್ಟಂ ಆವೃತ್ತಿಯಂತಹ ಸಾಧನದ ಕುರಿತು ಮೂಲ ಡೇಟಾ ಮತ್ತು ಭಾಷೆಯ ಸೆಟ್ಟಿಂಗ್, ಕೆರಿಯರ್ ಮತ್ತು ದೇಶ ಕೋಡ್‌ನಂತಹ ಸಾಧನದ ಕಾನ್ಫಿಗರೇಶನ್ ಕುರಿತಾದ ಡೇಟಾವನ್ನು ಒಳಗೊಂಡಂತೆ ಕಳುಹಿಸುತ್ತದೆ.

**Vellamo**

Vellamo Qualcomm ಇನ್ನೋವೇಶನ್ ಸೆಂಟರ್ ಇಂಕ್. ಒದಗಿಸುವ ಆಂಡ್ರ್ಯಾಯ್ಡ್ ಆಧರಿತ ಸಾಧನಗಳಿಗಾಗಿನ ("Vellamo") ಬೆಂಚ್‌ಮಾರ್ಕಿಂಗ್ ಸಾಫ್ಟ್‌ವೇರ್ ಅಪ್ಲಿಕೇಶನ್ ಆಗಿದೆ, Vellamo ಇದನ್ನು ಇನ್‌ಸ್ಟಾಲ್ ಮಾಡಿದ ಸಾಧನದ ಸಿಸ್ಟಂ ಕಾರ್ಯಕ್ಷಮತೆಯನ್ನು ವಿಶ್ಲೇಷಿಸುತ್ತದೆ ಮತ್ತು ವರದಿ ಮಾಡುತ್ತದೆ. ನಿಮ್ಮ ಸಾಧನದ ಕಾರ್ಯಕ್ಷಮತೆಯನ್ನು ನಾವು ಪರೀಕ್ಷಿಸಿರುವ ಇತರ ಸಾಧನಗಳೊಂದಿಗೆ ಹೋಲಿಕೆ ಮಾಡಲು ಆಯ್ಕೆ ಮಾಡಬಹುದು ಮತ್ತು ಹಾಗೆ ಮಾಡುವ ಮೂಲಕ, ನಿಮ್ಮ ಸಾಧನವು ನಮಗೆ ಪರೀಕ್ಷಾ ಫಲಿತಾಂಶಗಳು ಮತ್ತು ಸಿಸ್ಟಂ ಮಾಹಿತಿಯನ್ನು ಕಳುಹಿಸಬಹುದು. ಅಂತಹ ಸಿಸ್ಟಂ ಮಾಹಿತಿಯು ಇವುಗಳನ್ನು ಒಳಗೊಂಡಿರಬಹುದು: ಸಾಧನ ತಯಾರಕರು, ಮಾಡೆಲ್ ಮತ್ತು ಆವೃತ್ತಿ; ಪ್ರೊಸೆಸರ್, ಮೆಮೊರಿ ಮತ್ತು ಲಭ್ಯವಿರುವ ಸೆನ್ಸಾರ್‌ಗಳಂತಹ ನಿಮ್ಮ ಸಾಧನದಲ್ಲಿನ ಹಾರ್ಡ್‌ವೇರ್ ಬಗ್ಗೆ ಮಾಹಿತಿ; ಆಪರೇಟಿಂಗ್ ಸಿಸ್ಟಂ ವಿಧ ಮತ್ತು ಆವೃತ್ತಿ; ಡಿಸ್‌ಪ್ಲೆ ಮಾಹಿತಿ; ಇಂಟರ್‌ನೆಟ್ ಪ್ರೋಟೋಕಾಲ್ ಅಡ್ರೆಸ್, ಬ್ರೌಸರ್ ಯೂಸರ್ ಏಜೆಂಟ್, ಮತ್ತು ಸಾಧನವನ್ನು ಸಂಪರ್ಕಿಸುವ ಸೆಲ್ಯುಲರ್ ನೆಟ್‌ವರ್ಕ್ ಬಗ್ಗೆ ಮಾಹಿತಿ. ನೀವು ವಿನಂತಿಸುವ ಕಾರ್ಯಕ್ಷಮತೆಯ ಬೆಂಚ್‌ಮಾರ್ಕಿಂಗ್ ಸೇವೆಯನ್ನು ಒದಗಿಸಲು ಮತ್ತು ಮೊಬೈಲ್ ಸಾಧನದ ಕಾರ್ಯಕ್ಷಮತೆಯ ಬಗ್ಗೆ "ನೈಜ-ಪ್ರಪಂಚದ" ಅಂಕಿಅಂಶಗಳನ್ನು ಸಂಯೋಜಿಸಲು ಈ ನೀತಿಯಲ್ಲಿ ವಿವರಿಸಿರುವ ಉದ್ದೇಶಗಳಿಗಾಗಿ ನಾವು ಸಂಗ್ರಹಿಸಿದ ಡೇಟಾವನ್ನು ನಾವು ಬಳಸುತ್ತೇವೆ.

**XTRA –ಮುನ್ಸೂಚಿಸಿದ GNSS ಸ್ಯಾಟಲೈಟ್ ಆರ್ಬಿಟ್ ಡೇಟಾ**

ಮೊಬೈಲ್ ಸಾಧನದ ಕಾರ್ಯಕ್ಷಮತೆಯನ್ನು ಸುಧಾರಿಸುವುದಕ್ಕಾಗಿ XTRA ಯುಎಸ್‌ನಲ್ಲಿ Qualcomm Technologies Inc. ಮತ್ತು ಐರೋಪ್ಯ ಆರ್ಥಿಕ ವಲಯದಲ್ಲಿ QT Technologies Ireland Limited ಒದಗಿಸುವ ತಂತ್ರಜ್ಞಾನವಾಗಿದೆ. XTRA ಗ್ಲೋಬಲ್ ನ್ಯಾವಿಗೇಶನ್ ಸ್ಯಾಟಲೈಟ್ ಸಿಸ್ಟಂ (GNSS) ಉಪಗ್ರಹಗಳಿಂದ ಮುನ್ಸೂಚಿತವಾದ ಕಕ್ಷೆಯನ್ನು ಒಳಗೊಂಡಿರುವ ಡೇಟಾ ಫೈಲ್ ಅನ್ನು Qualcomm ನಿಂದ ಡೌನ್‌ಲೋಡ್ ಮಾಡುತ್ತದೆ. ಸ್ಥಳ ಆಧರಿತ ಅಪ್ಲಿಕೇಶನ್‌ಗಳನ್ನು ಬಳಸುವ ಅವಧಿಯಲ್ಲಿ XTRA ಡೇಟಾ ಫೈಲ್ ಬಳಸುವುದು ಸಾಧನವು ತನ್ನ ಸ್ಥಳವನ್ನು ಲೆಕ್ಕ ಹಾಕುವ ಸಮಯವನ್ನು ತಗ್ಗಿಸುತ್ತದೆ, ಇದರಿಂದ ಸಮಯ ಹಾಗೂ ಬ್ಯಾಟರಿ ಶಕ್ತಿಯನ್ನು ಉಳಿಸುತ್ತದೆ. XTRA ಸಾಫ್ಟ್‌ವೇರ್‌ನ ಹೊಸ ಆವೃತ್ತಿಗಳು ನಮ್ಮಿಂದ ಸ್ವಲ್ಪ ಪ್ರಮಾಣದ ಡೇಟಾವನ್ನು ಅಪ್‌ಲೋಡ್ ಮಾಡುತ್ತವೆ. ನಾವು

ಅಪ್‌ಲೋಡ್ ಮಾಡಿರುವ ಡೇಟಾವನ್ನು ಈ ನೀತಿಯಲ್ಲಿ ವಿವರಿಸಿದ ಸೇವೆಯ ಗುಣಮಟ್ಟ, ಸುರಕ್ಷತೆ ಮತ್ತು ಸಮಗ್ರತೆಯನ್ನು ಉಳಿಸಿಕೊಳ್ಳುವುದು ಹಾಗೂ ಸುಧಾರಿಸುವುದಂತಹ ಉದ್ದೇಶಗಳಿಗಾಗಿ ಬಳಸುತ್ತೇವೆ. XTRA ಕೆಳಗಿನ ಡೇಟಾ ವಿಧಗಳನ್ನು ಅಪ್‌ಲೋಡ್ ಮಾಡುತ್ತದೆ: ಯಾದೃಚ್ಛಿಕವಾಗಿ ರೂಪಿಸಿದ ವಿಶಿಷ್ಟ ID, ಚಿಪ್‌ಸೆಟ್ ಸಂಖ್ಯೆ ಮತ್ತು ಸೀರಿಯಲ್ ನಂಬರ್, XTRA ಸಾಫ್ಟ್‌ವೇರ್ ಆವೃತ್ತಿ, ಮೊಬೈಲ್ ದೇಶ ಕೋಡ್ ಮತ್ತು ನೆಟ್‌ವರ್ಕ್ ಕೋಡ್ (ದೇಶ ಮತ್ತು ವೈರ್‌ಲೆಸ್ ಆಪರೇಟರ್ ಗುರುತನ್ನು ಅನುಮತಿಸುವುದು) ಆಪರೇಟಿಂಗ್ ಸಿಸ್ಟಂ ಮತ್ತು ಆವೃತ್ತಿ, ಸಾಧನದ ಉತ್ಪಾದಕರು ಮತ್ತು ಮಾಡೆಲ್, ಅಪ್ಲಿಕೇಶನ್ ಪ್ರೊಸೆಸರ್ ಮತ್ತು ಮೋಡೆಂನ ಕೊನೆಯ ಬೂಟ್ ನಂತರದ ಸಮಯ ಮತ್ತು ಸಾಧನದಲ್ಲಿ ನಮ್ಮ ಸಾಫ್ಟ್‌ವೇರ್‌ನ ಪಟ್ಟಿ.